Advertorial

# ಕನಿಷ್ಠ ಗಾಯದ ಹೃದಯ ಶಸ್ತ್ರಚಿಕಿತ್ಸೆಯಲ್ಲಿ ಗಮನಾರ್ಹ ಸಾಧನೆ

## ಉದರ ಭಾಗದ ಮೂಲಕ ಕೊರೊನರಿ ಆರ್ಟಿಯರಿ ಬೈಪಾಸ್ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಿರ್ವಹಿಸಿದ ಫೋರ್ಟಿಸ್ ಆಸ್ಪತ್ರೆ ವೈದ್ಯರು

ಫೋರ್ಟಿಸ್ ಆಸ್ಪತ್ರೆಯ ಹೃದಯ ಶಸ್ತ್ರಚಿಕಿತ್ಸಾತಜ್ಞರ ತಂಡವು ಟ್ರಾನ್ಸ್ ಅಬ್ಡಮಿನಲ್ ಅಂಃಉ ಎಂದು ಕರೆಯಲ್ಪಡುವ ಕನಿಷ್ಠ ಗಾಯದ ಹೃದಯ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸುವ ಮೂಲಕ ಸಾಧನೆಯನ್ನು ಮೆರೆದಿದ್ದಾರೆ. ಮಹಾಪಧಮನಿಗೆ ಸಂಬಂಧಿಸಿದ ಹೃದ್ರೋಗದಿಂದ ಬಳಲುತ್ತಿದ್ದ 46 ವರ್ಷ ವಯಸ್ಸಿನ ಮಹಿಳೆಯ ಉದರದ ಮೇಲ್ಭಾಗದ ಮತ್ತು ಎದೆಯ ಗೂಡಿನ ನಡುವೆ ಸಣ್ಣ ಛೇದನವನ್ನು ಮಾಡುವ ಮೂಲಕ ಈ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ. ಈ ಮೂಲಕ ಎದೆಯನ್ನು ಛೇಧಿಸದೆ ಕನಿಷ್ಠ ಗಾಯದ ಬೈಪಾಸ್ ಶಸ್ತ್ರಚಿಕಿತ್ಸೆಯನ್ನು ಮಾಡಿದ ಹೆಗ್ಗಳಿಕೆಗೆ ಫೋರ್ಟಿಸ್ ವೈದ್ಯರ ತಂಡವು ಪಾತ್ರವಾಗಿದೆ.

**ಪ್ರಮುಖ ಪ್ರಯೋಜನಗಳು:**

**1.** ಶಸ್ತ್ರಚಿಕಿತ್ಸಾನಂತರದಲ್ಲಿನ ನೋವಿನ ಪ್ರಮಾಣದಲ್ಲಿ ನಾಟಕೀಯ ಇಳಿಕೆ ಮತ್ತು ಕಡಿಮೆ ಪ್ರಮಾಣದ ರಕ್ತಹಾನಿ– ಅರ್ಥಾತ್ ಶೀಘ್ರ ಉಪಶಮನ ಮತ್ತು ತುರ್ತು ನಿಗಾ ಘಟಕದಲ್ಲಿನ ವಾಸದ ಅವಧಿ ಕಡಿಮೆ.

**2.** ಗಾಯದ ಪ್ರಮಾಣ ಕೂಡ ಅತ್ಯಲ್ಪವಾಗಿರುವುದರಿಂದ ಸೌಂದರ್ಯವನ್ನು ಬಾಧಿಸುವ ಯಾವುದೇ ಕಲೆಗಳ ಕುರಿತಾದ ಭಯವಿಲ್ಲ.

**3.** ಯಾವುದೇ ಎಲುವುಗಳನ್ನು ಛೇಧಿಸುವ ಪ್ರಮೇಯವಿಲ್ಲದ್ದರಿಂದ ಹಾಗೂ ಉಪಶಮನ ಸುಲಭವಾಗುವದರಿಂದ ಮಧುಮೇಹ ರೋಗಿಗಳಿಗೆ ವಿಶೇಷವಾದ ಪ್ರಯೋಜನ.

**4.** ವಕ್ಷಾಸ್ಥಿಯ ಕೆಳಭಾಗದ ಒಳ ಮ್ಯಾಮರಿ ಅಪಧಮನಿಗಳು ಮತ್ತು ಉದರಭಾಗದ ಸುತ್ತಲೂ ಇರುವ ಗ್ಯಾಸ್ಟ್ರೋ ಎಪಿಪ್ಲೊಯೆಯಿಕ್ ಅಪಧಮನಿಗಳನ್ನು ಗರಿಷ್ಠ ಪ್ರಮಾಣದಲ್ಲಿ ಕಸಿಕೋಶಗಳಾಗಿ ಬಳಸಿಕೊಳ್ಳಬಹುದಾಗಿದೆ. ಅಂದರೆ ರೋಗಿಯು ಮುಂದೆ ತನ್ನ ಆರೋಗ್ಯವನ್ನು ಉತ್ತಮ ಜೀವನಶೈಲಿಯ ಮೂಲಕ ಚೆನ್ನಾಗಿ ಕಾಪಾಡಿಕೊಂಡು ಬಂದಲ್ಲಿ ಹಾಗೂ ನಿಯಮಿತವಾಗಿ ಔಷಧಿಗಳನ್ನು ಸೇವಿಸಿದಲ್ಲಿ ಈ ಕಸಿಯು ಬಹಳಕಾಲದವರೆಗೆ ತಾಳಿಕೆಗೆ ಬರುತ್ತದೆ.

**5.** ಗಾಯ ಮಾಯುವಿಕೆಯು ಶೀಘ್ರಗತಿಯದಾಗಿದ್ದು ಆಸ್ಪತ್ರೆಯ ವಾಸದ ಅವಧಿ ಅತಿ ಕಡಿಮೆಯದ್ದಾಗಿರುತ್ತದೆ. ಶೀಘ್ರವಾಗಿ ತಮ್ಮ ಚಟುವಟಿಕೆಗಳಿಗೆ ಹಿಂದಿರುಗಬಹುದು.

**6.** ಇತರ ಕನಿಷ್ಠ ಗಾಯದ ಶಸ್ತ್ರಚಿಕಿತ್ಸೆಗೆ ತಗಲುವಷ್ಟೇ ಖರ್ಚು ಇದಕ್ಕೂ ತಗಲುತ್ತದೆ.

**7.** ಈ ಶಸ್ತ್ರಚಿಕಿತ್ಸೆಯನ್ನು ವಯಸ್ಸಿನ ನಿರ್ಬಂಧವಿಲ್ಲದೆ ಅಹಾರ ಪ್ರಮಾಣದ ರೋಗಿಗಳಲ್ಲಿಯೂ ಕೈಗೊಳ್ಳಬಹುದಾಗಿದೆ. ಆದ್ದರಿಂದ ಜಾಗತಿಕವಾಗಿ ಹೊಸ ಮಾರ್ಗವನ್ನು ನಿರ್ಮಾಣ ಮಾಡುವಲ್ಲಿ ಹೆಚ್ಚಿನ ಸಾಮರ್ಥ್ಯವನ್ನು ಹೊಂದಿದೆ.

ಹೃದಯ ಶಸ್ತ್ರಚಿಕಿತ್ಸೆಯಲ್ಲಿ ಹೊಸ ಶಕೆಯನ್ನು ಆರಂಭಿಸಿದ ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯ ವೈದ್ಯರು ಈ ಗಮನಾರ್ಹ ಸಾಧನೆಯಿಂದಾಗಿ ಹೃದಯ ರೋಗದಿಂದ ಬಳಲುತ್ತಿದ್ದ ಮಹಿಳೆಯೊಬ್ಬಳು ಶೀಘ್ರವಾಗಿ ಉಪಶಮನಗೊಳ್ಳುವಂತೆ ಮಾಡುವಲ್ಲಿ




ಸಫಲರಾಗಿದ್ದಾರೆ. ಇದೇ ವೈದ್ಯರ ತಂಡವು ಅಖಿಲ ಭಾರತ ಹಾಗೂ ಆಸ್ಪಲ್ ಏಶಿಯಾ ಮಟ್ಟದಲ್ಲಿ ಪ್ರಪ್ರಥಮವಾಗಿ ಕನಿಷ್ಠಗಾಯದ ಬೈಪಾಸ್ ಶಸ್ತ್ರಚಿಕಿತ್ಸೆಯನ್ನು 28 ಸಪ್ಟೆಂಬರ್ 1995ರಲ್ಲಿ ಬೆಂಗಳೂರಿನ ಕನ್ನಿಂಗ್ ಹ್ಯಾಮ್ ರಸ್ತೆಯಲ್ಲಿರುವ ಫೋರ್ಟಿಸ್ ಆಸ್ಪತ್ರೆಯಲ್ಲಿ ಯಶಸ್ವಿಯಾಗಿ ನೆರವೇರಿಸಿದ ಸಂಗತಿಯನ್ನು ಇಲ್ಲಿ ಪ್ರಾಸಂಗಿಕವಾಗಿ ನೆನಪಿಸಿಕೊಳ್ಳಬಹುದಾಗಿದೆ.

ಮಹಾಪಧಮನಿಯ ತೊಂದರೆಯಿಂದ ಬಳಲುತ್ತಿದ್ದ ಬೀದರ್ ನಿವಾಸಿ ಮಹಳೆ ಚಿಕಿತ್ಸೆಯನ್ನರಸಿ ಫೋರ್ಟಿಸ್ ಆಸ್ಪತ್ರೆಗೆ ಬಂದಿದ್ದಳು. ಸಾಮಾನ್ಯವಾಗಿ, ಮಹಾಪಧಮನಿಯಲ್ಲಿ ಉಂಟಾಗಿರುವ ತಡೆಯನ್ನು ನಿವಾರಿಸಲು ಬೈಪಾಸ್ ಗ್ರಾಫ್ಟ್ ಶಸ್ತ್ರಚಿಕಿತ್ಸೆಯನ್ನು ಕೈಗೊಳ್ಳಲಾಗುತ್ತದೆ. ಇದನ್ನು ಮಾಡಬೇಕಾದರೆ ಎದೆಯ ಎಡಭಾಗವನ್ನು ಅಥವಾ ವಕ್ಷಾಸ್ಥಿಯನ್ನು ಛೇಧಿಸಬೇಕಾಗುತ್ತದೆ. ಆದರೆ, ವಿಶೇಷವಾಗಿ ಫೋರ್ಟಿಸ್ ಆಸ್ಪತ್ರೆಯ ಹೃದಯಶಸ್ತ್ರಚಿಕಿತ್ಸಾ ತಜ್ಞ ಡಾ.ಮುರಳಿ ಮನೋಹರ್ ಅವರು ಫೋರ್ಟಿಸ್ ಹೃದಯವಿಜ್ಞಾನ ವಿಭಾಗದ ಅಧ್ಯಕ್ಷರಾದ ಡಾ.ವಿವೇಕ್ ಜವಳಿ ಅವರ ಮಾರ್ಗದರ್ಶನದಲ್ಲಿ ಈ ಸೃಜನಶೀಲ ಪ್ರಕ್ರಿಯೆಯನ್ನು ಕೈಗೊಂಡು ಟ್ರಾನ್ಸ್ ಅಬ್ಡಮಿನಲ್ CABG (ಕೊರನರಿ ಆರ್ಟಿಯರಿ ಬೈಪಾಸ್ ಶಸ್ತ್ರಚಿಕಿತ್ಸೆ) ಎಂದು ಕರೆಯಲ್ಪಡುವ ಕನಿಷ್ಠ ಗಾಯದ ಹೃದಯ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿದ್ದಾರೆ. ಈ ಶಸ್ತ್ರಚಿಕಿತ್ಸೆಯಲ್ಲಿ ವಕ್ಷಾಸ್ಥಿಯ ಕೆಳಗಡೆ ಉದರ ಭಾಗದಿಂದ ಕೊಂಚ ಮೇಲಕ್ಕೆ ಚಿಕ್ಕ ಛೇಧನವನ್ನು ಮಾಡಿ ಉಪಕರಣವು ಹೃದಯವನ್ನು ತಲುಪುವ ರೀತಿ ಮಾರ್ಗವನ್ನು ಮಾಡಲಾಗುತ್ತದೆ. ಎಡಭಾಗದ ಮ್ಯಾಮರಿ ಅಪಧಮನಿಯಿಂದ ಹಿಡಿದು ಎಡ ಭಾಗದ ಐಂಆ ಅಪಧಮನಿಯಗುಂಟ ಬೈಪಾಸ್ ಕಸಿಯನ್ನು ಮಾಡಲಾಗುತ್ತದೆ. ಸ್ಟರ್ನಲ್ ಸ್ಪೇರಿಂಗ್ ಸಬ್‌ಕ್ಸಿಫಾಯ್ಡ್




ಅಪ್ರೋಚ್ ಫಾರ್ ಮಿನಿಮಲ್ ಅಕ್ಸೆಸ್ ಕೊರೊನರಿ ಆರ್ಟಿಯರಿ ಬೈಪಾಸ್ ಗ್ರಾಫ್ಟಿಂಗ್ ಎಂದು ಕೂಡ ಕರೆಯಲ್ಪಡುವ ಈ ಶಸ್ತ್ರಚಿಕಿತ್ಸೆಯು ಕನಿಷ್ಠ ಗಾಯದ ಅಂಃಉ ಶಸ್ತ್ರಚಿಕಿತ್ಸೆಗಳ ಪೈಕಿ ಅತ್ಯಂತ ವಿನೂತನ ಮಾದರಿಯದ್ದಾಗಿದೆ. ಆದ್ದರಿಂದ ಭಾರತದ ಮಟ್ಟಿಗೆ ಬಲು ಅಪರೂಪದ ಶಸ್ತ್ರಚಿಕಿತ್ಸೆಯೆಂದೇ ಪರಿಗಣಿಸಬಹುದು. ಈ ಶಸ್ತ್ರಚಿಕಿತ್ಸೆಗೆ ಒಳಗಾದ ರೋಗಿಯಲ್ಲಿ, ಟ್ರಾನ್ಸ್ ಅಬ್ಡಮಿನಲ್ ಪ್ರಕ್ರಿಯೆಯನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಕಾರಣ ಛೇಧನವು ಅತ್ಯಂತ ಚಿಕ್ಕ ಗಾತ್ರದ್ದಾಗಿರುವ ಕಾರಣದಿಂದ ಪಾರಂಪರಿಕ ಬೈಪಾಸ್ ಕಸಿ ಶಸ್ತ್ರಚಿಕಿತ್ಸೆಗೆ ಹೋಲಿಸಿದಲ್ಲಿ ಗಾಯದ ಕಲೆಗಳು ಅಷ್ಟಾಗಿ ಕಂಡುಬರುವುದಿಲ್ಲ.

ಇದನ್ನು 'ಆಫ್–ಪಂಪ್ ಶಸ್ತ್ರಚಿಕಿತ್ಸೆ' ಎಂದು ಕೂಡ ಕರೆಯಲಾಗುತ್ತದೆ. ಹಾಗೆಂದರೆ, ಹೃದಯವನ್ನು ಹಾರ್ಟ್ ಲಂಗ್ ಉಪಕರಣಕ್ಕೆ ಜೋಡಿಸುವ ಅವಶ್ಯಕತೆ ಇಲ್ಲಿ ಕಂಡುಬರುವುದಿಲ್ಲ. ಕಸಿಮಾಡುವಾಗ ಹೃದಯ ಬಡಿತವನ್ನು ಸುಸ್ಥಿರಗೊಳಿಸುವ ಪ್ರಕ್ರಿಯೆಯನ್ನು ಇದು ಒಳಗೊಳ್ಳುತ್ತದೆ. ಈ ರೀತಿಯ ಪ್ರಕ್ರಿಯೆಯು ವಯಸ್ಸಾದ ರೋಗಿಗಳಿಗೆ, ಅದರಲ್ಲಿಯೂ ಶ್ವಾಸಕೋಶದ ರೋಗಗಳು ಮತ್ತು ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿರುವವರಿಗೆ ವರದಾನವಾಗಿದೆ. ವಕ್ಷಾಸ್ಥಿಯ ಅಡಿಗಿರುವ ಒಳ ಮ್ಯಾಮರಿ ಅಪಧಮನಿ ಹಾಗೂ ಉದರ ಭಾಗದ ಗ್ಯಾಸ್ಟ್ರೋ ಎಪಿಪ್ಲೊಯೆಯಿಕ್ ಅಪಧಮನಿಗಳನ್ನು ಬಹುವಿಧ ಅಪಧಮನಿ ಕಸಿಕೋಶಗಳಾಗಿ ಬಳಸಿಕೊಳ್ಳಬಹುದಾಗಿದೆ. ಹೀಗೆ ಮಾಡುವುದರಿಂದ ಒಂದೊಮ್ಮೆ ರೋಗಿಯು ಮುಂದೆ ತನ್ನ ಆರೋಗ್ಯವನ್ನು ಉತ್ತಮ ಜೀವನಶೈಲಿಯ ಮೂಲಕ ಚೆನ್ನಾಗಿ ಕಾಪಾಡಿಕೊಂಡು ಬಂದಲ್ಲಿ ಈ ಕಸಿಯು ಬಹಳಕಾಲದವರೆಗೆ ತಾಳಿಕೆಗೆ ಬರುತ್ತದೆ.




"ಈ ರೀತಿಯ ಶಸ್ತ್ರಚಿಕಿತ್ಸೆಯು ಕನಿಷ್ಟಗಾಯದ ಶಸ್ತ್ರಚಿಕಿತ್ಸೆಯಲ್ಲಿ ನಮ್ಮ ನೈಪುಣ್ಯತೆಯನ್ನು ಬಲಗೊಳಿಸಿ ಇನ್ನೂ ಒಂದು ಹೆಜ್ಜೆ ಎತ್ತರಿಸಿದಂತಾಗಿದೆ. ಎದೆಯ ಭಾಗವನ್ನು ಛೇಧಿಸದೆ, ಅಥವಾ ಯಾವುದೇ ಇನ್ನಿತರ ಛೇಧನವನ್ನು ಮಾಡದೇ ಈ ಶಸ್ತ್ರಚಿಕಿತ್ಸೆಯನ್ನು 46 ವರ್ಷ ವಯಸ್ಸಿನ ಮಹಿಳೆಗೆ ಮಾಡಿದ್ದು, ಕನಿಷ್ಠ ಗಾಯದ ಬೈಪಾಸ್ ಕಸಿ ಶಸ್ತ್ರಚಿಕಿತ್ಸೆ ವಿಭಾಗದಲ್ಲಿ ಹೊಸ ಶಕೆಯನ್ನು ಆರಂಭಿಸಿದಂತಾಗಿದೆ. ಇದು ಏಕಕಸಿ ಪ್ರಕ್ರಿಯೆಗಳಿಗೆ ಯೋಗ್ಯವಾದ ಶಸ್ತ್ರಚಿಕಿತ್ಸೆಯಾಗಿದ್ದರೂ 2–3 ಕಸಿಗಳ ಅವಶ್ಯಕತೆಯಿರುವ ರೋಗಿಗಳಲ್ಲೂ ಕೈಗೊಳ್ಳಬಹುದಾದ ವಿಧಾನವಾಗಿದೆ. ಮಧುಮೇಹ, ಉಸಿರಾಟದ ತೊಂದರೆ, ಅಥವಾ ಬೊಜ್ಜಿನ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳ ಪಾಲಿಗೆ ಈ ವಿಧಾನವು ಹೆಚ್ಚಿನ ಪ್ರಯೋಜನವನ್ನು ಒದಗಿಸುತ್ತದೆ." ಎಂದು ಫೋರ್ಟಿಸ್ ಆಸ್ಪತ್ರೆಯ ಹೃದಯವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ವಿವೇಕ್ ಜವಳಿ ವಿವರಿಸಿದರು.

**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:**

154/9, **Bannerghata Road,** Opp. IIM-B, Bangalore - 560 076. **Tel:** 9538995523 / 080 6621 4444.
**Email:**care.bng@fortishealthcare.com

14, **Cunningham Road,** Bangalore - 560 052. **Tel:** 96868 60310 / 080 4199 4444.
**Email:**connect2cg@fortishealthcare.com